ಶ್ರೀ ಸೋಮಲಿಂಗಪ್ಪ ಎಂ ಎಸ್ (ಸಿರಗುಪ್ಪ)148(226)

ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಶಿರಗುಪ್ಪ ತಾಲ್ಲೂಕಿನಲ್ಲಿ ಹರಿಯುವ ತುಂಗಭದ್ರಾ ನದಿಗೆ ಹೆರಕಲ್ಲು, ದಡೇಸೂಗೂರು, ಹಚ್ಚೋಳ್ಳಿ, ಬ್ಯಾರೇಜ್ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ ಎಸ್ ಈಶ್ವರಪ್ಪ

ಅ) ಸದ್ಯಕ್ಕೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ

ಶ್ರೀ ಸೋಮಣ್ಣ (ಬಿನ್ನಿಪೇಟೆ)149(349)

ಮಾನ್ಯ ಉನ್ನತ ಶಿಕ್ಷಣ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಹಂಪಿ ಕನ್ನಡ ವಿಶ್ವವಿದ್ಯಾಲಯವು ಹೊರತಂದಿರುವ ಪದವಿ ಪೂರ್ವ ಶಿಕ್ಷಣ ಇಲಾಖೆಯು ಅನುಮೋದಿಸಿರುವ ಕರ್ನಾಟಕ ದ್ವಿತೀಯ ಸಮಾಜಶಾಸ್ತ್ರ ಪಠ್ಯದ 6ನೇ ಅಧ್ಯಾಯದಲ್ಲಿ ವಿಶ್ವಕರ್ಮ ಜನಾಂಗದ ವಿರುದ್ಧ ವಿವಾದಾತ್ಮಕ ಬರಹವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಸಮುದಾಯವನ್ನು ಎಡಜಾತಿ ಎಂದು ಗುರ್ತಿಸಿರುವುದರ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು,

ಇ) ಈ ಪುಸ್ತಕವನ್ನು ರದ್ದುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಡಿ ಹೆಚ್ ಶಂಕರಮೂರ್ತಿ

ಅ) ಬಂದಿದೆ

ಆ) ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು ಈಗಾಗಲೇ ಈ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ, ಈ ಪುಸ್ತಕದ ಮಾರಾಟವನ್ನು ದಿ 14–06–2007ರಿಂದ ಸ್ಥಗಿಗೊಳಿಸಲಾಗಿದೆ ಆಕ್ಷೇಪಿತ ವಿಷಯವನ್ನು ಪರ್ಯಪುಸ್ತಕ ದಿಂದ ತೆಗೆದುಹಾಕಲು ಕ್ರಮ ಕೈಗೊಳ್ಳಲಾಗುತ್ತಿದೆ

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)150(342)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ 2005–06ರಿಂದ ಇಲ್ಲಿಯವರೆಗೆ ಕೊಟ್ಟಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಎಷ್ಟು ಶಾಲೆಗಳನ್ನು ನೀಡಲಾಗಿದೆ,

ಇ) ಇದುವರೆಗೂ ಎಷ್ಟು ಬೇಡಿಕೆಗಳು ಬಂದಿವೆ,

ಈ) ಹಂಚಿಕೆ ಮಾಡಲು ಅನುಸರಿಸುವ ಕ್ರಮಗಳೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ

ಅ) ಸರ್ವ ಶಿಕ್ಷಣ ಅಭಿಯಾನದಡಿ ಮಂಜೂರಾದ ಸರ್ಕಾರಿ ಪ್ರಾಥಮಿಕ ಶಾಲೆಗಳು